# ಬುತ್ತಿ ಚಿಗುರು

ಕಲೆ: ಗಣೇಶ ಆಚಾರ್ಯ

## ಹೆಲ್ಮೆಟ್ ಬೇಕು

ರಾತ್ರಿ ಸುಮಾರು ಹನ್ನೊಂದು ಗಂಟೆ ಸಮಯ. ರಮೇಶ ಮತ್ತು ಅವನ ಗೆಳೆಯ ಸುರೇಶ ಕ್ಲಬ್ಬಿನಿಂದ ಹೊರ ಬರುತ್ತಿದ್ದಂತೆಯೇ ರಮೇಶ ತನ್ನ ಗೆಳೆಯನಿಗೆ, 'ಈಗ ಅರ್ಜೆಂಟಾಗಿ ಒಂದು ಹೆಲ್ಮೆಟ್ ಬೇಕಲ್ಲ? ಇಲ್ಲೇ ಎಲ್ಲಾದರೂ ಹತ್ತಿರದಲ್ಲಿ ಹೆಲ್ಮೆಟ್ ಅಂಗಡಿ ಗೊತ್ತಿದ್ದರೆ ಕರೆದುಕೊಂಡು ಹೋಗು' ಎಂದ. ಸುರೇಶ, 'ಅರೆ! ಎಲ್ಲಾ ಬಿಟ್ಟು ಈಗ ಯಾಕೊ ಹೆಲ್ಮೆಟ್? ಪೊಲೀಸಿನವರು ಯಾರೂ ಈ ಸಮಯದಲ್ಲಿ ಹಿಡಿಯುವುದಿಲ್ಲ. ಸೀದಾ ಮನೆಗೆ ನಡಿ. ನಾಳೆ ಕೊಂಡರಾಯಿತು' ಎಂದ. ಅದಕ್ಕೆ ರಮೇಶ, 'ಈಗ ಪೊಲೀಸಿನವರು ಯಾರೂ ಇರುವುದಿಲ್ಲ ನಿಜ. ಆದರೆ, ಮನೆಯ ಬಾಗಿಲಲ್ಲಿ ನನ್ನ ಹೆಂಡತಿ ನಿಂತಿರುತ್ತಾಳೆ. ಅವಳ ಕೈಯಲ್ಲಿ ಏನು ಬೇಕಾದರೂ ಇರಬಹುದು. ಅದಕ್ಕೆ' ಎಂದ.

**ಎಂ.ಕೆ. ಮಂಜುನಾಥ್**





## ಅಕ್ಕಾ ಎನ್ನುತ್ತಿದ್ದಾಳೆ?

ಬೆಳಗ್ಗೆ ತಿಂಡಿ ಮಾಡುವಾಗ ಪಮ್ಮಿ ತನ್ನ ಗಂಡ ತಿಮ್ಮನಿಗೆ ಕೇಳಿದಳು, 'ಏನ್ರಿ? ನೀವು ನಮ್ಮ ಮನೆಕೆಲಸದ ಪದ್ಮಳಿಗೆ 'ಐ ಲವ್ಯು' ಅಂತ ಏನಾದ್ರೂ ಹೇಳಿದಿರೇನು?' ಎಂದು. ಗಾಬರಿಗೊಂಡ ತಿಮ್ಮ, 'ಯಾಕೆ? ಏನಾಯ್ತು?' ಎಂದ. 'ಇಷ್ಟು ದಿನ ನನ್ನನ್ನ ಮೇಡಂ... ಮೇಡಂ... ಅನ್ನುತಿದ್ದ ಪದ್ಮ, ನಿನ್ನೆಯಿಂದ ಅಕ್ಕಾ ಅನ್ನುತ್ತಿದ್ದಾಳೆ. ಅದಕ್ಕೆ...' ಎಂದಳು.

**ಮಹಾಂತೇಶ ಬಾಗೇವಾಡಿ**